(iii) ಹೊಸದಾಗಿ ನೀರು ಸರದಿ ತೆರಿಗೆಯನ್ನು ವಿಧಿಸುವುದಕ್ಕೆ ಅಥವಾ ಈಗಿರತಕ್ಕ ನೀರು ಸರದಿ ತೆರಿಗೆಯನ್ನು ಬದಲಾವಣೆಮಾಡುವುದಕ್ಕೆ ;

ಇಂಡಿಯಾ ಸರ್ಕಾರದವರ ಅನುಮೋದನವು ಅವಶ್ಯಕವೆ ?

ಉತ್ತರ. ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(i) ಇಲ್ಲ.
(ii) ಇಲ್ಲ.
(iii) ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇರಿಗೇಷನ್ ವರ್ಕ್ಸ್ ಪ್ರಾರಂಭಿಸಬೇಕಾದರೆ ಅನುಮತಿ ಪಡೆಯಬೇಕಾಗಿಲ್ಲವೆಂದು ಹೇಳಿದ್ದೀರಿ. ಕ್ಯಾಪಿಟಲ್ ವರ್ಕ್ಸ್ ಹೊಸದಾಗಿ ಮಾಡುವುದಕ್ಕೆ ಇಂಡಿಯಾ ಸರ್ಕಾರದ ಅಪ್ಪಣೆ ಪಡೆಯಬೇಡವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕ್ಯಾಪಿಟಲ್ ವರ್ಕ್ಸ್ ಶುರುಮಾಡಬೇಕಾದರೆ ಇಂಡಿಯಾ ಸರ್ಕಾರಕ್ಕೆ ಪ್ಲಾನ್ ವಗೈರೆ ಕಳುಹಿಸಿ ಅವರ ಅಭಿಪ್ರಾಯ ಪಡೆಯಬೇಕಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಲಹೆಯನ್ನೂ ಕೇಳಬೇಕಾಗಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

Bad Condition of Roads under Public Works Management.

* ಪ್ರಶ್ನೆ 45.—ಶ್ರೀ ಎಚ್. ಸಿದ್ದನಂಜಪ್ಪನವರು (ಹಾಸನ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಪಬ್ಲಿಕ್ ವರ್ಕ್ಸ್ ಇಲಾಖೆಯ ರಸ್ತೆಗಳು, ಅದರಲ್ಲೂ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಬೆಂಗಳೂರು, ಮಂಗಳೂರು ರಸ್ತೆಯು, ಬಹಳಮಟ್ಟಿಗೆ ಕೆಟ್ಟುಹೋಗಿರುವ ಸಂಗತಿಯು ಸರ್ಕಾರದವರ ಗಮನಕ್ಕೆ ಬಂದಿದೆಯೆ :

(b) ಆ ರಸ್ತೆಗಳು ಅಷ್ಟು ಕೆಟ್ಟಿರಲು ಕಾರಣವೇನು; ಅವು ಎಂದಿನಿಂದ ಈ ಸ್ಥಿತಿಯಲ್ಲಿವೆ ;

(c) ಆ ರಸ್ತೆಗಳನ್ನು ಚೆನ್ನಾಗಿ ದುರಸ್ತುಮಾಡಿ ಅವುಗಳನ್ನು ಸರಿಯಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲು ಜರುಗಿಸಬೇಕೆಂದಿರುವ ಕಾರ್ಯಕ್ರಮವೇನು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಆ ರಸ್ತೆಗಳಿಗಾಗಿ ವರ್ಷೇ ವರ್ಷೇ ದುರಸ್ತಿಗಳಿಗೆ ಮತ್ತು ವಿಶೇಷರೀತಿಯ ದುರಸ್ತಿಗಳಿಗೆ ಮಂಜೂರ್ಮಾಡುವ ಗ್ರಾಂಟುಗಳಿಗನುಸಾರವಾಗಿ, ಸಾಧ್ಯವಾದಮಟ್ಟಿಗೂ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡುಬರಲಾಗುತ್ತಿದೆ.

(b) ಕಳೆದ ಮೂರು ವರ್ಷಗಳಿಂದಲೂ ಸಂಚಾರವು ವಿಪರೀತವಾಗಿ ಹೆಚ್ಚಿನುವುದರಿಂದ ಆ ರಸ್ತೆಯು ಏಕಪ್ರಕಾರವಾಗಿ ನಾದುರಸ್ತಾಗುತ್ತಿದೆ.

(c) ರಸ್ತೆಗಳ ಪುನರ್ವಿಂಗಡನೆಗೆ ಏರ್ಪಟ್ಟಿರುವ ನಮಿತಿಯವರ ಸಲಹೆಗಳ ಮೇರೆಗೆ ನಂಸ್ಥಾನದಲ್ಲಿರುವ ನಾನಾ ತರಗತಿಗಳ ರಸ್ತೆಗಳ ನಂಬಂಧದಲ್ಲಿ ವರ್ಷೇ ವರ್ಷೇ ದುರಸ್ತಿಗಳಿಗಾಗಿ ಮೈಲೇಜು ಗ್ರಾಂಟನ್ನು ಹೆಚ್ಚಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ.

'ಸ್ಪೇಟ್‌ಫಂಡ್' ರಸ್ತೆಗಳಿಗೆ ಕಲ್ಲುರಗು ಹಾಕಿಸಿ ಜಲ್ಲಿ ಕಾಮಗಾರಿ ಮಾಡಿಸುವ ಕಾರ್ಯಕ್ರಮವೂ ಕೂಡ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ರಸ್ತೆಗಳ ದುರಸ್ತಿಗೆ ಏನು ಏರ್ಪಾಡು ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ ಹೆಚ್ಚು ಗ್ರಾಂಟು ಕೊಟ್ಟಿದೆ. ಸಾಧ್ಯವಾದಷ್ಟು ಉತ್ತಮಪಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ಯಾವಾಗ ರಿಪೇರಿ ಪ್ರಾರಂಭಿಸುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗತಾನೆ ಬಡ್ಜೆಟ್ ಮಂಜೂರು ಮಾಡಿದ್ದೀರಿ. ಇನ್ನು ಮೇಲೆ ಪೆಟಲ್ ಶೇಖರಿಸುವುದಕ್ಕೆ ಅಸೆಂಬ್ಲಿಯಾದ ಮೇಲೆ ತಿಳಿವಳಿಕೆ ಕೊಡುತ್ತೇವೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—(b) ಪ್ರಶ್ನೆಗೆ ಉತ್ತರವಾಗಿ 'due to heavy increase in traffic the road is subjected to constant wear and tear for the last three years' ಎಂದು ಹೇಳಿದೆ. ಸಂಚಾರವು ಈ ಮೂರು ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚಿ ರಸ್ತೆಯು ತೀರ ಕೆಡಲು ಕಾರಣವೇನು ?

The Hon'ble Sri T. MARIAPPA.—For the last three years the number of vehicles has increased and in fact we have not been able to allot more money for special repairs. Therefore a bad road has become worse.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಾಗಿ ಅರ್ಥವಾಗುತ್ತಿಲ್ಲವೆಂದು ಪುನಃ ಕೇಳಬೇಕಾಗಿದೆ. ಸಂಚಾರ ಅಷ್ಟು ಹೆಚ್ಚಲು ಕಾರಣವೇನು ?

The Hon'ble Sri T. MARIAPPA.—ಬಾಕಿ ರಸ್ತೆಗಳೂ ಕೂಡ ಕೆಟ್ಟಿವೆ. ಹೋದಸಲ ಚರ್ಚೆಯಾದಾಗ ವಿಚಾರ ಹೇಳಿದೆ. We were not able to provide more money for special repairs.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—(c) ಪ್ರಶ್ನೆಗೆ ಉತ್ತರವಾಗಿ ವರ್ಷೇ ವರ್ಷೇ ದುರಸ್ತಿಗಾಗಿ ಮೈಲೇಜು ಗ್ರಾಂಟು ಕೊಡಬೇಕೆಂದಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರಸ್ತೆಗಳ ಪುನರ್ವಿಂಗಡನೆಗೆ ಏರ್ಪಟ್ಟಿರುವ ಸಮಿತಿಯವರ ಸಲಹೆ ಪ್ರಕಾರ ಎಲ್ಲವನ್ನೂ ಪರಿಶೀಲಿಸಿದೆ. ನಾಲ್ಕು ತರಹ ರಸ್ತೆಗಳನ್ನು ವಿಂಗಡಿಸಬೇಕೆಂದಿದೆ, ಮೊದಲನೆಯ ದರ್ಜೆ ರಸ್ತೆಗೆ 750 ರೂಪಾಯಿ, ಎರಡನೆಯ ದರ್ಜೆಗೆ 500 ರೂಪಾಯಿ, ಮೂರನೆಯ ದರ್ಜೆಗೆ 200 ರಿಂದ 400 ರೂಪಾಯಿ, ನಾಲ್ಕನೆಯ ದರ್ಜೆಗೆ ಮಿನಿಮಂ 100 ರೂಪಾಯಿ ಇರಬೇಕೆಂದು ಮಾಡಿದೆ. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಮತ್ತು ಸರ್ಕಾರದವರು ಇದಕ್ಕೆ ಹಣ ಕೊಡಬೇಕು. ಇದಕ್ಕೆ 15 ಲಕ್ಷ ಚಿಲ್ಲರೆ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ರೂಪಾಯಿಗಳನ್ನು ಕೊಡಬೇಕು. ಜಿಲ್ಲಾಬೋರ್ಡಿನವರು 3 ಲಕ್ಷ ಚಿಲ್ಲರೆ ಕೊಡಬೇಕು.

The Hon'ble Sri T. MARIAPPA.—The whole question of increasing the annual maintenance grants is under examination, according to the report of the Road Classification Committee.

Sri H. B. GUNDAPPA GOWDA.—We are concerned with the State Fund roads.

The Hon'ble Sri T. MARIAPPA.—In addition to the grant from the District Board, the Government also have got to give money, Now we have provided more money for special repairs to those roads. We have also increased the annual maintenance grants. We have to take steps hereafter to improve the road surface.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ರೋಡ್‌ಕ್ಲಾಸಿಫಿಕೇಷನ್ ಸಮಿತಿ ನೇಮಕ ಮಾಡಿದ್ದು ಯಾವಾಗ, ಅವರು ಶಿಫಾರಸನ್ನು ಯಾವಾಗ ಕಳುಹಿಸಿದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 1–1½ ವರ್ಷದ ಕೆಳಗೆ ಸಮಿತಿ ನೇಮಕವಾಯಿತು. ಎರಡು ಸಾರಿ ಸೇರಲಾಗಿತ್ತು. ಅವರ ಶಿಫಾರಸ್ಸುಗಳನ್ನು ರಿಕ್ಲಾಸಿಫಿಕೇಷನ್‌ಗೋಸ್ಕರ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ 3–4 ತಿಂಗಳ ಹಿಂದೆ ಕಳುಹಿಸಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಸ್ಟೇಟ್ ಫಂಡ್ ರೋಡುಗಳ ವಿಚಾರ ನೀವು ಹೇಳುತ್ತಾ ಇದ್ದೀರಿ.

The Hon'ble Sri T. MARIAPPA.—All roads. The Hon'ble Member is aware that we have got State Fund roads, Marketing roads, District Fund roads maintained by Government, District Fund roads maintained by District Boards and also Inter-Village Communication roads. We wanted to take a comprehensive view of the entire matter and reclassify the roads into Class 1, Class 2, Class 3 and Class 4. If all the District Boards ratify the decision taken at the Committee meeting, probably they will also make provision for increase of annual maintenance grants and there is equal responsibility on the part of the Government to contribute equally.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಸಮಿತಿ ಶಿಫಾರಸಿನ ಪ್ರಕಾರ ರಸ್ತೆ ಸರಿಪಡಿಸುವುದಕ್ಕೆ ಎಷ್ಟು ಹೆಚ್ಚಾಗಿ ನೀವು ಹಣ ಕೊಡಬೇಕಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು 15 ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಅವರು 3 ಲಕ್ಷ ಚಿಲ್ಲರೆ ರೂಪಾಯಿ ಕೊಡಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—A programme of asphalting the State Fund roads is also under contemplation ಎಂದು ಹೇಳಿದ್ದೀರಿ. ಜಾರಿಗೆ ತರಬೇಕೆಂದರೆ ಅದು ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಆದಷ್ಟು ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಿ, ಧೂಳು ಇಲ್ಲದಂತೆ ಮಾಡಬೇಕೆಂದಿದ್ದೇವೆ. ಹೆಚ್ಚಾಗಿ ದುಡ್ಡು ಕೊಟ್ಟರೆ ಎಲ್ಲಾ ರಸ್ತೆಗಳನ್ನೂ ಮಾಡುವುದಕ್ಕೆ ಅಡ್ಡಿಯೇನೂ ಇಲ್ಲ. ಹೆಚ್ಚು ದುಡ್ಡು ದೊರೆಯುವವರೆಗೂ ಒಂದೊಂದು ಡಿಸ್ಟ್ರಿಕ್ಟ್‌ನಲ್ಲಿ 10 ಮೈಲಿ ಉದ್ದ ಮಾಡಬೇಕೆಂದಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—A programme is under contemplation ಎಂದು ಹೇಳಿದ್ದೀರಿ ಅದಕ್ಕೆ ಎಷ್ಟು ದುಡ್ಡು ಆಗ ಬೇಕು ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—5 ವರ್ಷದ ಯೋಜನೆ ಹಾಕಿ ಅದರ ಪ್ರಕಾರ ಹಣ ಒದಗಿಸಿದ್ದೇವೆ. ಖಚಿತವಾದ ಅಂಕಿ ಅಂಶಗಳನ್ನು ಕೊಡಲು ನನಗೆ ಈಗ ನೆನಪಿಲ್ಲ. ಈ ಸಾರಿ ಬಡ್ಜೆಟ್‌ನಲ್ಲಿ ಕೆಲವು ಭಾಗದಲ್ಲಾದರೂ ಕೂಡ dustless surface ಮಾಡುವುದಕ್ಕೆ ಹಣ ಒದಗಿಸಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ವರ್ಷೇ ವರ್ಷೇ ರಿಪೇರಿಗಾಗಿ ಸ್ಪೆಷಲ್ ಗ್ರ್ಯಾಂಟ್ ಕೊಡುತ್ತೀರಿ. ಅದೆಲ್ಲಾ ಸರಿಯಾಗಿ ಖರ್ಚಾಗುತ್ತ ಇದೆಯೇ ಎಂಬುದನ್ನು ತಿಳಿದುಕೊಳ್ಳಲು check and overcheck ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Check and overcheck ಇದೆ. Correct statistics maintain ಮಾಡಬೇಕು ಎಂಬುದಾಗಿ P. W. D. ಕೋಡ್‌ನಲ್ಲಿ ವಿಧಾಯಕ ಆಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ಬೇಕಾದಷ್ಟು ಸಾಮಾನುಜೆಲ್ಲಿ ವಗೈರೆ ಶೇಖರಿಸಿದ್ದಾರೆ, ಅದು ಸರಿಯಾಗಿ ಉಪಯೋಗವಾಗುತ್ತಿದೆಯೇ ಎಂಬುದಕ್ಕೆ check ಇಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕು ಇದಕ್ಕು ಸಂಬಂಧವಿಲ್ಲ. ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಬೇಕೆಂದು ಚುನಾವಣೆ ಮಾಡಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಸಿಮೆಂಟ್ ಕಾಂಕ್ರೀಟ್ ರಸ್ತೆ ಆಗದೆ ಇರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹಾಗೆಯೇ ಇದೆ.

Sri V. M. MASCARENHAS (Bangalore Retroceded Area– General).—Will it be possible for the Government to tell us what exactly will be the road surface that will be asphalted or concreted during the next five years ?

The Honble Sri T. MARIAPPA.—We have prepared a programme no doubt. But carrying in out depends upon the avilability of funds.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಟೌನ್‌ಲಿಮಿಟ್ಸ್‌ನ ಅತ್ತ ಕಡೆ 2 ಮೈಲಿ, ಇತ್ತ ಕಡೆ 2 ಮೈಲಿ ಸ್ಟೇಟ್ ಫಂಡ್ ರಸ್ತೆ ಅಸ್‌ಫಾಲ್ಟ್ ಮಾಡಲು ತಕ್ಷಣ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರಸ್ತೆ ಟಾರ್ಕಲಿಟ್ಸ್ ಒಳಗಿದ್ದರೆ dustless ಮಾಡಬೇಕೆಂದು ಪ್ರೊಗ್ರಾಂ ಇದೆ.

Sri A. BHEEMAPPA NAIK.—Will the Government kindly take up the execution of that much at least this year?

The Hon'ble Sri T. MARIAPPA.—We will try our best.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—4ನೇ ತರಗತಿ ರಸ್ತೆಗಳಿಗೆ ಮೈಲಿಗೆ 100 ರೂಪಾಯಿ ಕೊಡಬೇಕೆಂದಿದ್ದೀರಿ. ಅದು ಸಾಕಾಗುತ್ತದೆಯೇ?

Mr. SPEAKER.—The Hon'ble Member may put questions having a bearing on this question; and avoid asking general questions.

ಶ್ರೀ ಬಿ. ಚೆನ್ನಬೈರೇಗೌಡರು.—ನಾಲ್ಕನೇ ಕ್ಲಾಸ್ ರಸ್ತೆ ಎಂದರೆ ಎಂಥಾರಸ್ತೆ? ಮಣ್ಣಿನ ರಸ್ತೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—4ನೇ ಕ್ಲಾಸ್ ರಸ್ತೆಯನ್ನು ಐ. ಎ. ಸಿ. ರಸ್ತೆ ಅಂತ ಕರೆಯಬಹುದು.

ಶ್ರೀ ಬಿ. ಚೆನ್ನಬೈರೇಗೌಡರು.—ಮುನಿಸಿಪಾಲಟಿ ಸರಹದ್ದಿನ ಬನ್ನುಗಳು ಹೋಗತಕ್ಕ ಭಾಟಾ ಮಾರ್ಗಗಳನ್ನು ಟಾರು ಮಾಡುವುದು ಯಾರಿಗೆ ಸೇರಿದ್ದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಟೇಟ್ ಫಂಡ್ ರಸ್ತೆಯಾಗಿ ಮುನಿಸಿಪಲ್ ಸರಹದ್ದಿನಲ್ಲಿದ್ದರೆ ಅದರ ಜವಾಬ್ದಾರಿ ನಮ್ಮದು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾಸನ ಜಿಲ್ಲೆ).—ಕಳೆದ ಮೂರು ವರ್ಷಗಳಿಂದಲೂ ಸಂಚಾರವು ವಿಪರೀತವಾಗಿ ಹೆಚ್ಚಿರುವುದರಿಂದ ಆ ರಸ್ತೆಯು ಏಕ ಪ್ರಕಾರವಾಗಿ ನಾದುರಸ್ತಾಗುತ್ತಿದೆ ಎಂದು ಹೇಳಿದ್ದೀರಿ. ಈ ಮೂರು ವರ್ಷದಿಂದ ಹೆಚ್ಚು ಟ್ರಾಫಿಕ್ ಇದೆ ಎಂದ ಮೇರೆ ರೋಡ್ ಸೆಸ್ ಕೂಡ ಜಾಸ್ತಿ ಭರುತ್ತಿದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ. ರೋಡ್ ಸೆಸ್ ಬಂದೇ ಬರಬೇಕು.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಜಾಸ್ತಿ ಉತ್ಪತ್ತಿ ಆಗುತ್ತಿರುವ ಕಡೆ ಈ ಮೂರು ವರ್ಷದಿಂದ ಕೆಲಸ ಮಾಡದೇ ಇರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Availability of funds ಮೇರೆ ಹೋಗುತ್ತದೆಯೆಂದು ಆಗಲೇ ಉತ್ತರ ಕೊಟ್ಟೆ. ಬಜೆಟ್‌ನಲ್ಲಿ ಒದಗಿಸಬೇಕಾದರೇ ಸಾಧ್ಯವಾದಷ್ಟು ಜಾಸ್ತಿಯಾಗಿ ಒದಗಿಸಿದ್ದೇವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಈ ವರ್ಷವಾದರೂ ಆ ಕೆಲಸವನ್ನು ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತವಾಗಿಯೂ to the extent possible. I will try to see that these roads are improved.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳನ್ನು ನೋಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಡಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ರಿಪೇರಿ ಬಗ್ಗೆ ಖಾಯಂ ವ್ಯವಸ್ಥೆ ಮಾಡಿರುವುದು ಗೊತ್ತೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲೂ ಸಹ ಖಾಯಂ ಆದ ವ್ಯವಸ್ಥೆ ಇದೆ. ಹಣ ಸಾಲದು ಅಷ್ಟೆ.

Mr. SPEAKER.—Question No. 99. Sri K. Puttaswamy. The Hon'ble Member is not present. Question No. 99 will be treated as an unstarred question.

Sri M. C. VENKATESHAN (Mandya District—Depressed Class).—This is an important question. I request the Chair to kindly allow me to put it on his behalf.

Mr. SPEAKER.—Sri K. Puttaswamy is not present and he has not made any such request to the Chair in writing. So I cannot allow the Hon'ble Member to put the question on his behalf.

Mr. SPEAKER.—Question No. 149. Sri V. S. Narayana Rao. The Hon'ble Member is not present. This question also will be treated as unstarred.

Next Question No. 186. Sri S. Rangaramiah.

Pay and Prospects of Sub-Overseers in the Public Works Department.

*ಪ್ರಶ್ನೆ 186.—ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೆಲಸಕ್ಕೆ ನೇಮಕವಾಗಿರತಕ್ಕ ಸಬ್-ಓವರ್‌ಸಿಯರುಗಳ ಸಂಖ್ಯೆಯೆಷ್ಟು; ಅವರ ಪೈಕಿ ಎಷ್ಟು ಮಂದಿ ಖಾಯಂ ಆಗಿದ್ದಾರೆ; ಎಷ್ಟು ಮಂದಿ ಹಂಗಾಮಿಯಾಗಿದ್ದಾರೆ;

(b) ಖಾಯಂ ಆದ ಮತ್ತು ಹಂಗಾಮಿಯಾಗಿರುವ ಸಬ್-ಓವರ್‌ಸಿಯರುಗಳ ಸಂಬಳಗಳು ಮತ್ತು ಗ್ರೇಡುಗಳೇನು;

(c) ತಮ್ಮ ಸಂಬಳಗಳನ್ನು ಮತ್ತು ಗ್ರೇಡುಗಳನ್ನೂ ಪುನರ್ವಿಮರ್ಶಿಸಿ ಹೆಚ್ಚಿಸಿ ಕೊಡಬೇಕೆಂಬುದಾಗಿ ಸಬ್-ಓವರ್‌ಸಿಯರುಗಳಿಂದ ಮನವಿಗಳೇನಾದರೂ ಬಂದಿವೆಯೇ;

(d) ಸಬ್-ಓವರ್‌ಸಿಯರುಗಳಲ್ಲಿ ಸೇಕಡಾ 25ರಷ್ಟು ಮಂದಿಯನ್ನು ಓವರ್‌ಸಿಯರುಗಳ ದರ್ಜೆಗೆ ಬಡ್ತಿ ಮಾಡಬೇಕೆಂಬುದಾಗಿ ಸರ್ಕಾರದವರ ಹುಕುಮು ಹೊರಟಿದ್ದಿತೆ; ಅಂಥ ಹುಕುಮು ಆಗಿದ್ದಲ್ಲಿ, ಅದನ್ನು ಕಾರ್ಯರೂಪಕ್ಕೆ ತರಲಾಗಿದೆಯೇ?